ಈ) ಅಪಘಾತ ಪರಿಹಾರ ನಿಧಿಯನ್ನು ಸ್ಥಾಪಿಸಿದ್ದು ದಿನಾಂಕ: 26–07–2007 ರವರೆಗೆ ಈ ಬಾಬ್ತು ಸಂಗ್ರಹವಾಗಿರುವ ಮೊತ್ತ ರೂ.16.66 ಕೋಟಿ.

ಉ) ರೂ.1.30 ಕೋಟಿಯನ್ನು ಪರಿಹಾರ ಧನದ ರೂಪದಲ್ಲಿ ನಿಗಮದ ವಾಹನದಲ್ಲಿ ಪ್ರಯಾಣಿಸುತ್ತಿದ್ದ ಮೃತರ ವಾರಸುದಾರರಿಗೆ ನೀಡಲಾಗಿದೆ.

ಊ)

1) ಅ.ಪ.ನಿ. ಅರ್ಜಿ ಫಾರಂ ಮತ್ತು ವಾರಸುದಾರರ ಭಾವಚಿತ್ರ
2) ಅಫಿಡೇವಿಟ್
3) ಮರಣ ಪ್ರಮಾಣ ಪತ್ರ
4) ಪೋಸ್ಟ್ ಮಾರ್ಟಂ ವರದಿ
5) ವಂಶ ವೃಕ್ಷ
6) ಪೊಲೀಸ್ ಪಂಚನಾಮ ವರದಿ
7) ವಾರಸುದಾರರ ಬ್ಯಾಂಕ್ ಉಳಿತಾಯ ಪುಸ್ತಕದ ನಕಲು
8) ಪಡಿತರ ಚೀಟಿ ಮತ್ತು ಚುನಾವಣೆ ಗುರುತಿನ ಚೀಟಿ
9) ಪ್ರಥಮ ವರ್ತಮಾನ ವರದಿ (ಪೊಲೀಸ್ ಇಲಾಖೆ)
10) ಮೃತರ ವಾರಸುದಾರರ ಹೇಳಿಕೆಗಳು.
11) ಗ್ರಾಮಸ್ಥರ ಹೇಳಿಕೆಗಳು.
12) ಇಲಾಖೆಯ ನಿರಾಕ್ಷೇಪಣಾ ಪತ್ರ.
13) ಮೃತರು ಪ್ರಾಪ್ತ ವಯಸ್ಕರಾಗಿದ್ದು, ಅವರಿಗೆ ಮದುವೆಯಾಗಿದ್ದರ ಬಗ್ಗೆ ಪುರಾವೆಗಳನ್ನು ಒದಗಿಸುವುದು ಇಲ್ಲದಿದ್ದರೆ ಇಲ್ಲ ಎಂದು ಸ್ಪಷ್ಟವಾಗಿ ತಿಳಿಸುವುದು.

1323 (528) ಶ್ರೀ ನೆ.ಲ.ನರೇಂದ್ರಬಾಬು (ರಾಜಾಜಿನಗರ) : ಮಾನ್ಯ ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಪೊಲೀಸ್ ಇಲಾಖೆಯ ಸರಹದ್ದಿನಲ್ಲಿ 2006–07ನೇ ಸಾಲಿನಲ್ಲಿ ದಾಖಲಾಗಿರುವ ಅಪರಾಧಗಳ ಸಂಖ್ಯೆ ಎಷ್ಟು; (ವರ್ಗೀಕರಣದ ಅಂಕಿಅಂಶಗಳ ವಿವರ ಒದಗಿಸುವುದು);

ಆ) ಯಾವ ಯಾವ ಪ್ರಕರಣಗಳಲ್ಲಿ ಎಷ್ಟು ಅಪರಾಧಿಗಳಿಗೆ ಶಿಕ್ಷೆಯಾಗಿದೆ;

ಇ) ಈ ಅಪರಾಧಿಗಳಲ್ಲಿ ಜಾಮೀನಿನ ಮೇಲೆ ಬಿಡುಗಡೆಯಾದವರ ಸಂಖ್ಯೆ ಎಷ್ಟು;

ಈ) ಬೆಂಗಳೂರು ನಗರದಲ್ಲಿ ಕಳೆದ 3 ವರ್ಷಗಳಿಂದ ಅಪರಾಧಗಳು ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಇವುಗಳನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು;

ಊ) ನಗರದಲ್ಲಿ ಜನಸಂಖ್ಯೆಯ ಅನುಪಾತಕ್ಕನುಗುಣವಾಗಿ ಪೊಲೀಸ್ ಸಿಬ್ಬಂದಿಯವರನ್ನು ನೇಮಿಸಿಕೊಳ್ಳುವ ಯೋಚನೆ ಸರ್ಕಾರದ ಮುಂದಿದೆಯೇ;

ಋ) ನಗರದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣಗಳು ಎಷ್ಟು;

ಎ) ಈ ಪ್ರಕರಣಗಳ ಹಿನ್ನೆಲೆಯಲ್ಲಿ ಕೊಲೆಯಾದವರ ಸಂಖ್ಯೆ ಎಷ್ಟು; ಎಷ್ಟು ಜನರನ್ನು ಬಂಧಿಸಲಾಗಿದೆ?

ಶ್ರೀ ಎಂ.ಪಿ.ಪ್ರಕಾಶ್ (ಒಳಾಡಳಿತ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬೆಂಗಳೂರು ನಗರದ ಪೊಲೀಸ್ ಇಲಾಖೆಯ ಸರಹದ್ದಿನಲ್ಲಿ 2006–07ನೇ ಸಾಲಿನಲ್ಲಿ ದಾಖಲಾಗಿರುವ ಅಪರಾಧಗಳ ಸಂಖ್ಯೆಯು 2006ರಲ್ಲಿ 32433 ಮತ್ತು 2007ರಲ್ಲಿ 16004 (30–06–2007ರವರೆಗೆ) ಆಗಿದ್ದು, ವರ್ಗೀಕರಣದ ಅಂಕಿ–ಅಂಶಗಳ ವಿವರಗಳನ್ನು ಲಗತ್ತಿಸಿದೆ.

ಆ) 2006ರಲ್ಲಿ 1204 ಮತ್ತು 2007 ರಲ್ಲಿ 306 ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿದೆ.

ಇ) 2006ರಲ್ಲಿ 6131 ಮತ್ತು 2007ರಲ್ಲಿ 2895 ಅಪರಾಧಿಗಳು ಜಾಮೀನಿನ ಮೇಲೆ ಬಿಡುಗಡೆಯಾಗಿರುತ್ತಾರೆ.

ಇ) ಬೆಂಗಳೂರು ನಗರದಲ್ಲಿ ಕಳೆದ 3 ವರ್ಷಗಳಿಂದ ದಾಖಲಾಗಿರುವ ಅಪರಾಧಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುತ್ತದೆ.

ಉ) ಇಂತಹ ಪ್ರಕರಣಗಳನ್ನು ತಡೆಗಟ್ಟಲು ಠಾಣಾ ಮಟ್ಟದಲ್ಲಿ ಗಸ್ತು ವ್ಯವಸ್ಥೆಯನ್ನು ಹೆಚ್ಚಿಸಲಾಗಿದ್ದು, ಹೊಯ್ಸಳ ಮತ್ತು ಚೀತಾಗಳಲ್ಲಿ ಸಿಬ್ಬಂದಿಯನ್ನು ಗಸ್ತಿಗೆ ನೇಮಿಸಲಾಗಿದೆ ಮತ್ತು ಗುಪ್ತ ಮಾಹಿತಿ ಪಡೆಯಲು

ಸಿಬ್ಬಂದಿಯನ್ನು ನೇಮಿಸಿ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ. ಹಾಗೂ ವೈಜ್ಞಾನಿಕ ಸೌಲಭ್ಯಗಳೊಂದಿಗೆ ಅಪರಾಧಗಳನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಊ) ಹೌದು.

ಋ) 2 (ಎರಡು)

ಎ) ಈ ಪ್ರಕರಣಗಳ ಹಿನ್ನೆಲೆಯಲ್ಲಿ ಮೂರು ಜನರು ಕೊಲೆಯಾಗಿದ್ದು, ಈ ಸಂಬಂಧ 23 ಜನರನ್ನು ಬಂಧಿಸಲಾಗಿದೆ.

BANGALORE CITY POLICE
STATEMENT SHOWING CRIMES REPORTED AND DETECTED FOR THE YEARS 2006 & 2007

	CRIMES	2006			2007 (30-06-2007)		
		Reported	Detected	Convicted	Reported	Detected	Convicted
	Murder	199	156	-	118	66	-
PART-I	Murder (Gain)	19	12	-	4	3	-
	Dacoity	37	18	-	13	6	-
	Robbery	384	194	6	170	57	-
	Chain Snatching	263	110	-	121	17	-
	HBT (Day)	356	88	4	158	13	-
	HBT (Night)	1310	288	16	522	36	-
	House Thefts	1266	314	08	618	132	02
	M.V.Thefts	3497	708	-	1763	136	01
	Ordinary Thefts	2559	904	78	1126	230	02
	Cattle Thefts	31	16	01	39	22	-
	R.S.Property	1	1	-	-	-	-

	Cheating	1554	304	02	1016	203	-
	C.C.Notes	55	26	01	28	7	-
	Cr.Br.Trust	192	62	-	92	20	-
	304(A) IPC	884	884	-	463	463	-
PART-II	279,337,338						-
	IPC	6692	6692	-	3669	3669	-
	307 IPC	324	220	01	161	85	-
	Rioting	710	346	-	254	90	-
	Hurts	2640	1866	03	1261	653	-
	Kidnapping	99	69	-	61	29	-
	354 IPC	143	123	-	107	60	-
	498 A IPC	290	230	-	166	81	-
	376 IPC	33	24	-	33	25	-
	304 (B) IPC	50	42	-	28	20	-
	Other IPC Cases	2696	2488	102	1537	737	24
	SC/ST (FA) Act	103	63	-	48	22	-
	PCR Act	1	1	-	-	-	-
	NDPS Act	33	33	01	19	16	07
	ITP Act	480	473	68	153	136	-
	D.P. Act	265	214	-	141	65	-

	Excise Act	500	494	105	156	145	07
	K.P. Act (Gambling)	200	200	107	89	83	-
	K.P. Act	869	864	241	303	268	180
PART III	Other Acts	455	430	349	268	152	-
	107 Cr.P.C	249	237	-	93	79	-
	109 Cr.P.C.	2084	2074	76	959	914	56
	110 Cr.P.C.	883	882	70	448	422	27
	145 Cr.P.C.	11	11	-	1	1	-
PART IV	151 Cr.P.C	16	16	-	42	40	-

ಪೂರಕ ಟಿಪ್ಪಣಿ

ಬೆಂಗಳೂರು ನಗರದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧ ಪಟ್ಟಂತೆ ಈ ಕೆಳಕಂಡ ಪ್ರಕರಣಗಳು ದಾಖಲಾಗಿರುತ್ತವೆ.

1. ಮೈಕೋ ಲೇಔಟ್ ಪೊಲೀಸ್ ಠಾಣೆ ಮೊ.ಸಂ. 209/06 ಕಲಂ 302 ಜೊತೆಗೆ 304 ಐಪಿಸಿ ಪ್ರಕರಣವು ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಒಬ್ಬರು ಕೊಲೆಯಾಗಿದ್ದು, 8 ಜನ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ.

2. ತಿಲಕ್‌ನಗರ ಪೊಲೀಸ್ ಠಾಣೆ ಮೊ.ಸಂ. 34/07 ಕಲಂ 302–120(ಬಿ)–506(ಬಿ) ಜೊತೆಗೆ 34 ಐಪಿಸಿ ಮತ್ತು 3, 25 ಶಸ್ತ್ರ ಕಾಯ್ದೆರಡಿಯಲ್ಲಿ ಪ್ರಕರಣವು ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಇಬ್ಬರು ಕೊಲೆಯಾಗಿದ್ದು, 15 ಜನ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ.

ಮೇಲ್ಕಂಡ ರಿಯಲ್ ಎಸ್ಟೇಟ್ ವ್ಯವಹಾರದ ಪ್ರಕರಣಗಳಲ್ಲದೆ ಬೆಂಗಳೂರು ನಗರದಲ್ಲಿ ಭೂ ವಿವಾದಕ್ಕೆ ಸಂಬಂಧಪಟ್ಟಂತೆ 4 ಕೊಲೆ ಪ್ರಕರಣಗಳು ದಾಖಲಾಗಿದ್ದು, ಸದರಿ ಪ್ರಕರಣಗಳಲ್ಲಿ 4 ಜನರ ಕೊಲೆಯಾಗಿದ್ದು 12 ಜನ ಆರೋಪಿಗಳನ್ನು ದಸ್ತಗಿರಿ ಮಾಡಲಾಗಿದೆ.

* * *